# ಕರ್ನಾಟಕ ಜೀವವೈವಿಧ್ಯ ಮಂಡಳಿಯ ಆರನೇ ಸಭೆಯ ವಿಷಯಸೂಚಿ

1. ದಿನಾಂಕ 06–09–2006ರಂದು ಜರುಗಿದ ಐದನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ದೃಢೀಕರಿಸುವುದು.
2. ಐದನೇ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸುವುದು.
3. ಕುವೆಂಪು ಸ್ಮಾರಕ ಜೈವಿಕವನದ ಕೆಲಸ ಕಾರ್ಯಗಳ ಪ್ರಗತಿ ವರದಿ.
4. ಕರ್ನಾಟಕ ಕರಾವಳಿಯ ಜೀವವೈವಿಧ್ಯ ಮಾಹಿತಿ ಮತ್ತು ನಿರ್ವಹಣಾ ಯೋಜನೆ ಅನುಷ್ಠಾನದ ಪ್ರಗತಿ ಪರಿಶೀಲನೆ.
5. ವಿಶೇಷ ಆಹ್ವಾನಿತರನ್ನು ಮಂಡಳಿಯ ಸಭೆಗೆ ಆಹ್ವಾನಿಸುವ ಬಗ್ಗೆ.
6. ಜೈವಿಕ ಸಂಪನ್ಮೂಲ ಬಳಕೆಯ ಮೇಲೆ ಶುಲ್ಕ ವಿಧಿಸುವ ಬಗ್ಗೆ.
7. ರಾಜ್ಯದ ಜೀವವೈವಿಧ್ಯ ಬಗ್ಗೆ ಅಧ್ಯಯನ, ಸಂಶೋಧನೆ, ಸಮೀಕ್ಷೆ, ದಾಖಲೀಕರಣ ಮತ್ತು ಸಂರಕ್ಷಣೆಗಾಗಿ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ
8. ಮೀನುಗಳ ಅಧ್ಯಯನ ಮತ್ತು ಸಂರಕ್ಷಣೆಯ ಯೋಜನಾ ಪ್ರಸ್ತಾವನೆಗಳು:
   I. ನಿಷೇಧಿಸಲಾದ ಆಫ್ರಿಕಾದ ಅಣೆಮೀನಿನ ಸ್ಥಿತಿಗತಿ ಹಾಗೂ ಇದರಿಂದ ಸ್ಥಳೀಯ ಮೀನುಗಳು ನಾಶವಾಗುತ್ತಿರುವ ಕುರಿತು ಅಧ್ಯಯನ ಕೈಗೊಳ್ಳುವ ಬಗ್ಗೆ.
   II. ಪಶ್ಚಿಮಘಟ್ಟಗಳ ತುಂಗಾ ನದಿಯಲ್ಲಿ ಮತ್ಸ್ಯವೈವಿಧ್ಯ ಅಧ್ಯಯನ ಕೈಗೊಳ್ಳುವ ಬಗ್ಗೆ.
   III. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹರಿಹರಪುರ ಮತ್ಸ್ಯಧಾಮದ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಗಳ ಯೋಜನೆಗೆ ಮಂಜೂರಾತಿ ನೀಡುವ ಬಗ್ಗೆ.
9. ಉತ್ತರ ಕನ್ನಡ ಜಿಲ್ಲೆಯ ಜನಾಂಗ ತಳಿ ವೈವಿಧ್ಯ, ಭೂ ಸಂತತಿ ಸಂರಕ್ಷಣೆಯ ಸಾಂಪ್ರದಾಯಿಕ ಜ್ಞಾನದ ಜೀವವೈವಿಧ್ಯ ಮಾಹಿತಿಯ ದತ್ತಾಂಶ ತಯಾರಿ–ಕಿರು ಸಂಶೋಧನಾ ಯೋಜನೆ.
10. ಜೀವವೈವಿಧ್ಯಕ್ಕೆ ಸಂಬಂಧಿಸಿದಂತೆ ಮಂಡಳಿಯಿಂದ 7 ಯೋಜನೆಗಳನ್ನು ವಿವಿಧ ದಾನಿ ಸಂಸ್ಥೆಗಳಿಗೆ ಕಳುಹಿಸಿರುವುದನ್ನು ಅನುಮೋದಿಸುವ ಬಗ್ಗೆ.
11. 2007–08ನೇ ಸಾಲಿನ ಮಂಡಳಿಯ ಆಯವ್ಯಯ ಅನುಮೋದಿಸುವ ಬಗ್ಗೆ
12. ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಲೆಕ್ಕ ಪರಿಶೋಧಕರ ಹುದ್ದೆಯನ್ನು ಸೃಷ್ಟಿಸಿ ನಿಯೋಜನೆ ಮೇರೆಗೆ ಪಡೆಯುವ ಬಗ್ಗೆ
13. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಆರ್ಥಿಕ ವಾರ್ಷಿಕ ವರದಿಗಳ ಒಪ್ಪಿಗೆ ಹಾಗೂ ಸದಸ್ಯ ಕಾರ್ಯದರ್ಶಿಗಳಿಗೆ ಆಡಳಿತಾತ್ಮಕ ಅಧಿಕಾರ ನೀಡುವ ಬಗ್ಗೆ
14. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಕಛೇರಿ ಕೆಲಸ ಕಾರ್ಯಗಳಿಗೆ ಬಾಡಿಗೆ ಆಧಾರದ ಮೇಲೆ ವಾಹನ ಪಡೆಯುವ ಬಗ್ಗೆ
15. ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡಲು ಅನ್ವೇಷಣೆ ಸಮಿತಿ (ಖಜಚಿಡಿಛಿಜು ಅಂಟಟುಣಣಜಜ) ಯನ್ನು ರಚಿಸುವ ಬಗ್ಗೆ
16. ಸದಸ್ಯ ಕಾರ್ಯದರ್ಶಿಗಳಿಗೆ ವಸತಿ ಗೃಹ ಒದಗಿಸುವ ಬಗ್ಗೆ
17. ಅಧ್ಯಕ್ಷರ ಅನುಮತಿ ಮೇರೆಗೆ ಇನ್ನಿತರ ವಿಷಯಗಳು.

# ಕರ್ನಾಟಕ ಜೀವವೈವಿಧ್ಯ ಮಂಡಳಿಯ ಆರನೇ ಸಭೆಯ ವಿಷಯಸೂಚಿಯ
## ಪೂರಕ ಟಿಪ್ಪಣಿ

**ವಿಷಯ: 1 ದಿನಾಂಕ: 06–09–2006 ರಂದು ಜರುಗಿದ ಐದನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ದೃಢೀಕರಿಸುವುದು.**

ದಿನಾಂಕ: 06–09–2006 ರಂದು ಜರುಗಿದ ಮಂಡಳಿಯ ಐದನೇ ಸಭೆಯ ನಡವಳಿಗಳನ್ನು ಪತ್ರ ಸಂಖ್ಯೆ;ಕಜೀಮಂ/ಸಭೆ–5/10/2005–06, ದಿ:18–09–2006ರಂದು ಎಲ್ಲಾ ಸದಸ್ಯರಿಗೆ ಕಳುಹಿಸಲಾಗಿರುತ್ತದೆ. ಯಾವುದೇ ಅಭಿಪ್ರಾಯ ಬಂದಿಲ್ಲವಾದ್ದರಿಂದ ಇದನ್ನು ದೃಢೀಕರಿಸುವುದು.

**ವಿಷಯ: 2 ಐದನೇ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸುವುದು.**

| ಕ್ರಮ ಸಂಖ್ಯೆ | ವಿಷಯ | ಕೈಗೊಂಡ ಕ್ರಮ |
|---|---|---|
| 1) | ಕರ್ನಾಟಕ ಜೀವವೈವಿಧ್ಯ ನಿಯಮಗಳು, 2005ನ್ನು ಕಾನೂನು ಬದ್ಧಗೊಳಿಸುವ ಬಗ್ಗೆ | ಮಂಡಳಿಗೆ ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರನ್ನೇ ಅಧ್ಯಕ್ಷರನ್ನಾಗಿ ಹಾಗೂ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸುವ ಬಗ್ಗೆ ಹಾಗೂ ಮಂಡಳಿಗೆ 5 ಜನ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br>ಆದರೆ ಸರ್ಕಾರವು ಮಂಡಳಿಗೆ ಅಧ್ಯಕ್ಷರನ್ನು ಆಯ್ಕೆ ಮಾಡಲು ಕರ್ನಾಟಕ ಜೀವವೈವಿಧ್ಯ ನಿಯಮಗಳು, 2005ರನ್ವಯ ಒಂದು ಅನ್ವೇಷಣಾ ಸಮಿತಿಯನ್ನು ದಿನಾಂಕ: 13–03–2007ರಂದು ರಚಿಸಿದೆ.<br>ಪ್ರಸ್ತುತ ಮಂಡಳಿಯು ವನವಿಕಾಸ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು ಹೆಚ್ಚಿನ ಸ್ಥಳಾವಕಾಶವೂ ಲಭ್ಯವಿಲ್ಲದಿರುವುದರಿಂದ ಹಾಗೂ ಮಂಡಳಿಗೆ ಕನಿಷ್ಠ ಅನುದಾನ ಸರ್ಕಾರದಿಂದ ದೊರೆಯುತ್ತಿರುವುದರಿಂದ ಪೂರ್ಣಾವಧಿ ಅಧ್ಯಕ್ಷರನ್ನು ನೇಮಿಸಿದಲ್ಲಿ ಅವರಿಗೆ ಸೂಕ್ತ ಸಹಾಯಕ ಸಿಬ್ಬಂದಿ ಪೂರೈಸಲು ಕಷ್ಟವಾಗುತ್ತದೆ. ಆದ್ದರಿಂದ ಅನ್ವೇಷಣಾ ಸಮಿತಿಯ ಕಾರ್ಯವನ್ನು ಕೈಬಿಡಲು ಸರ್ಕಾರಕ್ಕೆ ವಿನಂತಿಸುವ ನಿರ್ಣಯ ಕೈಗೊಳ್ಳಲು ಮಂಡಿಸಲಾಗಿದೆ. |
| 2) | ಪ್ರಾಣಿಶಾಸ್ತ್ರ ಹಾಗೂ ಸಸ್ಯಶಾಸ್ತ್ರ ವಿಷಯಗಳ ರೀಡರ್/ಸಹ ಪ್ರಾಧ್ಯಾಪಕರ ಹುದ್ದೆಗಳನ್ನು ನಿಯೋಜನೆ ಮೇಲೆ ಭರ್ತಿಗೊಳಿಸುವ ಬಗ್ಗೆ: | ಇಲ್ಲಿಯವರೆಗೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾ॥ವಿ.ಎನ್.ನಾಯಕ್ ಇವರ ನಿಯೋಜನೆ ಕುರಿತು ಯಾವುದೇ ಮಾಹಿತಿ ಬಾರದಿರುವುದರಿಂದ ರಾಜ್ಯದ ಇದರ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು ಪ್ರಾಣಿಶಾಸ್ತ್ರ ವಿಷಯದ ಸಹ ಪ್ರಾಧ್ಯಾಪಕರನ್ನು ನಿಯೋಜನೆ ಮೇರೆಗೆ ಭರ್ತಿಮಾಡಿಕೊಳ್ಳುವ ನಿರ್ಣಯ ಕೈಗೊಳ್ಳಲು ಮಂಡಿಸಿದೆ. |
| 3) | ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ತರಬೇತಿ ಹಾಗೂ ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿ ಬಗೆಗಿನ ಯೋಜನೆ ಕುರಿತು/ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಬಗ್ಗೆ ಪ್ರಗತಿ ಪರಿಶೀಲನೆ: | ವಿಷಯಸೂಚಿ ಸಂಖ್ಯೆ 7ರಲ್ಲಿ ಪ್ರತ್ಯೇಕ ವಿಷಯವಾಗಿ ಮಂಡಿಸಲಾಗಿದೆ. |
| 4) | ಜೀವವೈವಿಧ್ಯ ಸಂರಕ್ಷಣೆ ಸಂಬಂಧಿ ಯೋಜನೆಗಳನ್ನು ಪರಿಶೀಲಿಸಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚೆನ್ನೈ ಹಾಗೂ | ಜೀವವೈವಿಧ್ಯ ಸಂಬಂಧಿಸಿದ ಯೋಜನೆಗಳನ್ನು ವಿವಿಧ ದಾನಿ ಸಂಸ್ಥೆಗಳಿಗೆ ಕಳುಹಿಸಲಾಗಿದ್ದು ಮಂಜೂರಾತಿ ನಿರೀಕ್ಷಿಸಲಾಗುತ್ತಿದೆ. (ಅನುಬಂಧ–1) |

| | | |
|---|---|---|
| | ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ | |
| 5) | ಕುವೆಂಪು ಸ್ಮಾರಕ ಜೈವಿಕವೈವಿಧ್ಯ ಯೋಜನೆ ಅನುಷ್ಠಾನದ ಪರಿಶೀಲನೆ: | ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ವಿಧಾನ ಸಭೆಯಲ್ಲಿ ನೀಡಿದ ಭರವಸೆಯನ್ವಯ ದಿನಾಂಕ: 29-12-06ರಂದು ಕುಪ್ಪಳ್ಳಿಗೆ ಭೇಟಿ ನೀಡಿ ಸ್ಥಳೀಯ ಶಾಸಕರು, ಜನತೆ ಹಾಗೂ ಅರಣ್ಯಾಧಿಕಾರಿಗಳೊಂದಿಗೆ ಚರ್ಚಿಸಿರುತ್ತಾರೆ. ಯೋಜನಾ ಅನುಷ್ಠಾನದ ಬಗ್ಗೆ ವಿಷಯಸೂಚಿ 3ರಲ್ಲಿ ಪ್ರತ್ಯೇಕವಾಗಿ ಮಂಡಿಸಲಾಗಿದೆ. |
| 6) | ಶ್ರೀ.ಗಂಗಾಧರ.ವಿ.ಮಡ್ಡಿಕೇರಿ, ಕಾರ್ಯ ನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ಸೇವೆಯನ್ನು ಮಂಡಳಿಯಲ್ಲಿ ಮುಂದುವರಿಸುವ ಬಗ್ಗೆ: | ಇವರ ನಿಯೋಜನಾ ಅವಧಿಯನ್ನು ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/184/ಮೀಇಸೇ/2006, ದಿನಾಂಕ:16-01-2006ರಲ್ಲಿ 13-08-2006 ರಿಂದ 2 ವರ್ಷಗಳಿಗೆ ಮುಂದುವರಿಸಲಾಗಿದೆ. |
| 7) | ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ಕಾರನ್ನು ಖರೀದಿಸುವ ಬಗ್ಗೆ | ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ಒಂದು ಮಾರುತಿ ಎಸ್ಟೀಂ ಕಾರನ್ನು ಖರೀದಿಸಲಾಗಿರುತ್ತದೆ. |
| 8) | ನಲ್ಲೂರು ಗ್ರಾಮದ ಹುಣಸೇ ತೋಪನ್ನು ಜೀವವೈವಿಧ್ಯ ಪಾರಂಪರಿಕ ತಾಣವಾಗಿ ಘೋಷಿಸುವ ಬಗ್ಗೆ: | ದೊಡ್ಡಬಳ್ಳಾಪುರ ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ಹಲವಾರು ಶತಮಾನಗಳ ಹಳೆಯ ಹುಣಸೇ ತೋಪು ಅತಿ ವಿಶಿಷ್ಠವಾಗಿರುವುದರಿಂದ ಈ ತೋಪನ್ನು ಜೀವವೈವಿಧ್ಯ ಕಾಯ್ದೆ 2002ರ ಪ್ರಕರಣ 37ರಡಿ ಜೀವವೈವಿಧ್ಯ ಪಾರಂಪರಿಕ ತಾಣವಾಗಿ ರಾಜ್ಯ ಸರ್ಕಾರವು ಘೋಷಿಸಿದೆ. (ಸರಕಾರದ ಆದೇಶ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ) |
| 9) | ರಾಜ್ಯದ ಕೈಗಾರಿಕೆಗಳು ಬಳಸಿಕೊಳ್ಳುತ್ತಿರುವ ಜೈವಿಕ ಸಂಪನ್ಮೂಲಗಳ ಮೇಲೆ ಶುಲ್ಕ/ಸೆಸ್ ವಿಧಿಸುವ ಬಗ್ಗೆ: | ಜೈವಿಕ ಸಂಪನ್ಮೂಲಗಳ ಮೇಲಿನ ಶುಲ್ಕ/ಸೆಸ್ ವಿವರಗಳ ಬಗ್ಗೆ ವಿಷಯಸೂಚಿ-6ರಲ್ಲಿ ಮಂಡಿಸಲಾಗಿದೆ. |

**ವಿಷಯ: 3 ಕುವೆಂಪು ಸ್ಮಾರಕ ಜೈವಿಕವನದ ಕೆಲಸ ಕಾರ್ಯಗಳ ಪ್ರಗತಿ ವರದಿ:**

ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು ಇವರು ದಿನಾಂಕ 29-12-2006 ರಂದು ತೀರ್ಥಹಳ್ಳಿ ತಾಲ್ಲೂಕು ಕುಪ್ಪಳಿಗೆ ಭೇಟಿ ನೀಡಿ ಕುವೆಂಪು ಜನ್ಮದಿನೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಕುವೆಂಪು ಜೀವವೈವಿಧ್ಯ ನಿಸರ್ಗೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿದರು. ತದನಂತರ ಸ್ಥಳೀಯರೊಂದಿಗೆ ಕುವೆಂಪು ಜೈವಿಕಧಾಮದ ಮೀಸಲು ಅರಣ್ಯ ಪ್ರದೇಶದ ಬಗ್ಗೆ ಇರುವ ಸಮಸ್ಯೆಗಳನ್ನು ಚರ್ಚಿಸಿ ಅಚಿತಿಮ ನಿರ್ಣಯ ಕೈಗೊಳ್ಳಲು ದಿನಾಂಕ:03-01-2007ರಂದು ಬೆಂಗಳೂರಿನಲ್ಲಿ ಸಭೆಯನ್ನು ನಡೆಸಲಾಯಿತು.

ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಭೆಯಲ್ಲಿ ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳು, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ತೀರ್ಥಹಳ್ಳಿಯ ಶಾಸಕರಾದ ಶ್ರೀ.ಅರಗ ಜ್ಞಾನೇಂದ್ರ ಗ್ರಾಮಪಂಚಾಯ್ತಿ ಅಧ್ಯಕ್ಷರು ಹಾಗೂ ಸಾರ್ವಹನಿಕರುಗಳೊಡನೆ ಸಮಾಲೋಚನೆ ನಡೆಸಲಾಯಿತು. ರಾಷ್ಟ್ರಕವಿ ಕುವೆಂಪು ಸ್ಮಾರಕ ಜೈವಿಕಧಾಮ ಅಭಿವೃದ್ಧಿಗೆ ಸ್ಥಳೀಯ ಗ್ರಾಮಸ್ಥರು ಮತ್ತು ಜನ ಪ್ರತಿನಿಧಿಗಳಿಂದ ಯಾವುದೇ ಪ್ರತಿರೋಧ ಇರದಿರುವ ಬಗ್ಗೆ ಒಮ್ಮತದ ಅಭಿಪ್ರಾಯ ಮೂಡಿ ಬಂದಿತು. ಕುವೆಂಪು ಸಂದೇಶವನ ಸ್ಥಾಪನೆ, ಅಭಯಾರಣ್ಯ ಸಂರಕ್ಷಣಾ ಕಾರ್ಯಗಳ ಮತ್ತು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸ್ಥಾಪನೆ ಹಾಗೂ ಅವುಗಳ ಮೂಲಕ ಜನತಾ ಜೀವವೈವಿಧ್ಯ ದಾಖಲಾತಿ ಕಾರ್ಯ ಹಮ್ಮಿಕೊಳ್ಳುವ ಬಗ್ಗೆಯೂ ಯಾವುದೇ ತಕರಾರು ಇಲ್ಲದಿರುವುದರಿಂದ ಈ ಕಾರ್ಯಕ್ರಮವನ್ನು ಮುಂದುವರಿಸಲು ತೀರ್ಮಾನಿಸಲಾಯಿತು.

**ಈಗಾಗಲೇ ಮಂಜೂರಾದ/ನಿಗಧಪಡಿಸಿದ ಕಾರ್ಯಗಳ ವಿವರಗಳು ಈ ಕೆಳಕಂಡಂತಿವೆ:**

| ಕ್ರಮ ಸಂಖ್ಯೆ | ಕಾರ್ಯಕ್ರಮ | ಅನುಷ್ಠಾನದ ಸಂಸ್ಥೆಗಳು | ರೂ.ಲಕ್ಷಗಳಲ್ಲಿ |
|---|---|---|---|
| 1 | ಮೋಜಿಣಿ, ಗಡಿಗುರುತಿಸುವಿಕೆ ಮತ್ತು ಕರಡು ಯೋಜನೆ ತಯಾರು ಮಾಡುವ ಬಗ್ಗೆ | ಅರಣ್ಯ, ಇಲಾಖೆ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ವಿಭಾಗಗಳೂ | 17.15 |
| 2 | ಚಿಪ್ಪಲಗುಡ್ಡ ಮತ್ಸ್ಯಧಾಮದ ಅಭಿವೃದ್ಧಿ ಮತ್ತು ಸಂರಕ್ಷಣೆ | ಮೀನುಗಾರಿಕೆ ನಿರ್ದೇಶಕರು | 5.00 |
| 3 | ಜನತಾ ಜೀವವೈವಿಧ್ಯ ದಾಖಲಾತಿ ಕಾರ್ಯ | ಜೀವವೈವಿಧ್ಯ ನಿರ್ವಹಣಾ ಸಮಿತಿಗಳು | 10.00 |

| | | | |
|---|---|---|---|
| 4 | ಕುವೆಂಪು ಸಂದೇಶವನ ನಿರ್ಮಾಣ | ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ | 13.50 |
| **ಒಟ್ಟು** | | | **ರೂ.45.65** |

| | |
|---|---|
| ಕುವೆಂಪು ಸಂದೇಶವನಕ್ಕೆ ಮಂಜೂರಾದ ಅನುದಾನ | 1,00,00,000 |
| ಮಂಜೂರಾದ ಕಾರ್ಯಗಳಿಗೆ ತಗುಲಿದ ವೆಚ್ಚ | 45,65,000 |
| ಒಟ್ಟ ಉಳಿಕೆ ಹಣ | 54,35,000 |
| ಇಲ್ಲಿಯವರೆಗೆ ಠೇವಣಿಯಿಂದ ಗಳಿಸಿದ ಬಡ್ಡಿ | 9,47,798 |
| **ಒಟ್ಟು** | **ರೂ.63,82,798** |

ಶಿವಮೊಗ್ಗ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿರವರು ಕುವೆಂಪು ಜೈವಿಕ ಉದ್ಯಾನದಲ್ಲಿ ಉದ್ದೇಶಿಸಿದ ಕಾರ್ಯಚಟುವಟಿಕೆಗಳ ವಿವರಣೆ ಅನುಬಂಧ–3ರಲ್ಲಿ ನೀಡಿದೆ. ಈ ಕಾರ್ಯಗಳನ್ನು 2 ವರ್ಷಗಳ ಅವಧಿಯಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾವಿಸಿರುತ್ತಾರೆ. ಮೊದಲನೇ ವರ್ಷ ರೂ.19.74 ಲಕ್ಷ ಹಾಗೂ 2ನೇ ವರ್ಷದಲ್ಲಿ ರೂ.16.70 ಲಕ್ಷ ವೆಚ್ಚದಲ್ಲಿ ಅಂದರೆ ಒಟ್ಟ ರೂ.36.44 ಲಕ್ಷಗಳ ಯೋಜನಾ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮಂಡಳಿಯ 5ನೇ ಸಭೆಯಲ್ಲಿ ತೀರ್ಮಾನಿಸಿದಂತೆ, ಕುವೆಂಪು ಜೈವಿಕ ಉದ್ಯಾನದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಸದಸ್ಯ ಕಾರ್ಯದರ್ಶಿಯವರಿಗೆ ನೀಡಿದ ಅನುಮತಿ ಮೇರೆಗೆ ಈ ಕಾರ್ಯಚಟುವಟಿಕೆಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಈ ಕ್ರಮವನ್ನು ಮಾಹಿತಿ ಹಾಗೂ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ಸ್ಥಿರ ಠೇವಣಿ ಖಾತೆಯಿಂದ ಗಳಿಸಿದ ಬಡ್ಡಿ ಹಣ ರೂ.9.47 ಲಕ್ಷಗಳನ್ನು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಇತರ ಸ್ಥಾನಿಕ ಸಂಸ್ಥೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲು ಮತ್ತು ಜನತಾ ಜೀವವೈವಿಧ್ಯ ದಾಖಲಾತಿ ಕಾರ್ಯವನ್ನು ಹಮ್ಮಿಕೊಳ್ಳಲು ಮಂಡಳಿಯ ಅನುಮೋದನೆ ಕೋರಲಾಗಿದೆ.

ಕುವೆಂಪು ಸ್ಮಾರಕ ಜೈವಿಕಧಾಮದಡಿ 8 ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲು ವಿವಿಧ ತಾಂತ್ರಿಕ ತಜ್ಞರನ್ನು ವಿನಂತಿಸಿಕೊಳ್ಳಲಾಗಿದ್ದು ಕಾರ್ಯ ಪ್ರಗತಿಯಲ್ಲಿದೆ.

ಕುವೆಂಪು ಪ್ರತಿಷ್ಠಾನ ಹಾಗೂ ಮಂಡಳಿಯ ಸಹಯೋಗದಲ್ಲಿ ಕುವೆಂಪು ಜನ್ಮದಿನ ಸಂದರ್ಭಗಳಲ್ಲಿ ಮೂರು ದಿನಗಳ ಕಾಲ (29,30 ಹಾಗೂ 31 ಡಿಸೆಂಬರ್ 2006) ರಾಜ್ಯ ಮಟ್ಟದ ಜೀವವೈವಿಧ್ಯ ನಿಸರ್ಗೋತ್ಸವವನ್ನು ಹಮ್ಮಿಕೊಳ್ಳಲಾಯಿತು. ರಾಜ್ಯ ಹಾಗೂ ಹೊರ ರಾಜ್ಯದ ಸುಮಾರು 250 ಪ್ರತಿನಿಧಿಗಳು, ಸ್ಥಳೀಯ ವಿದ್ಯಾರ್ಥಿಗಳು, ಕೃಷಿಕರು ಹಾಗೂ ಸಾರ್ವಹನಿಕರು ಈ ಸಮಾರಂಭದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡಿರುತ್ತಾರೆ.

**ವಿಷಯ : 4 ಕರ್ನಾಟಕ ಕರಾವಳಿಯ ಜೀವವೈವಿಧ್ಯ ಮಾಹಿತಿ ಮತ್ತು ನಿರ್ವಹಣಾ ಯೋಜನೆ ಅನುಷ್ಠಾನದ ಪ್ರಗತಿ ಪರಿಶೀಲನೆ :**

ಕರ್ನಾಟಕ ಕರಾವಳಿಯ ಜೀವವೈವಿಧ್ಯ ಮಾಹಿತಿ ಮತ್ತು ನಿರ್ವಹಣಾ ಯೋಜನೆಗೆ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ಬೆಂಗಳೂರು ಇವರು ದಿನಾಂಕ :25–05–2005ರಂದು ರೂ.94.50ಲಕ್ಷ ಮಂಜೂರು ಮಾಡಿರುತ್ತಾರೆ. ಅನುಮೋದಿತ ಯೋಜನಾ ವಿವರಗಳು ಮತ್ತು ಅನುಷ್ಠಾನಗೊಳಿಸಬೇಕಾದ ಕಾರ್ಯ ಚಟುವಟಿಕೆಗಳು ಹಾಗೂ ಡಿಸೆಂಬರ್, 2006ರ ಅಂತ್ಯದವರೆಗೆ ಆದ ಆರ್ಥಿಕ ಪ್ರಗತಿಯ ವಿವರಗಳು ಈ ಕೆಳಗಿನಂತಿವೆ.

| ಕ್ರಮ ಸಂಖ್ಯೆ | ಸಂಸ್ಥೆ | ಚಟುವಟಿಕೆ | ಯೋಜನಾ ಮತ್ತ (ರೂ.) | ಆರ್ಥಿಕ ಪ್ರಗತಿ |
|---|---|---|---|---|
| 1 | ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ | ಅ) ಸಸ್ಯ ಹಾಗೂ ಜಾನುವಾರು ವೈವಿಧ್ಯ | 17,31,900 | 5,00,000 |
| 2 | 1. ಕೇಂದ್ರಿಯ ಸಾಗರ ಮತ್ಸ್ಯ | ಕಡಲಜಲಚರಗಳ ವೈವಿಧ್ಯ | 22,04,000 | 15,29,472 |

| | | | | |
|---|---|---|---|---|
| | ಸಂಶೋಧನಾ ಸಂಸ್ಥೆ<br>2. ಖಟಒಅಇಖಖಿ, ಬೆಂಗಳೂರು | ಪತಂಗಗಳ ವೈವಿಧ್ಯ<br>ಪಕ್ಷಿ ವೈವಿಧ್ಯ<br>ಓಡೋನೆಟ್ಸ್ ವೈವಿಧ್ಯ<br>ವ್ಯವಸ್ಥಾಪಕ ಸಂಸ್ಥೆಯ ಶುಲ್ಕ | 57,000<br>75,300<br>43,000<br>3,45,600 | 50,000<br>75,300<br>35,000<br>3,45,600 |
| 3 | ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ | ಮಾಹಿತಿ ತಂತ್ರಜಾಲ ಅಭಿವೃದ್ಧಿಗೊಳಿಸುವುದು | 10,00,000 | 2,00,000 |
| 4 | ಕರ್ನಾಟಕ ಜೀವವೈವಿಧ್ಯ ಮಂಡಳಿ | ಅ) ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ವ್ಯವಸ್ಥೆ<br>ಆ) ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿ<br>ಇ) ರೌಂಡೆಡ್ ಆಫ್ | 13,22,500<br>15,90,000<br>700 | 4,71,342<br>2,86,000 |
| **ಮೊತ್ತ** | | | **94,50,000** | **44,92,714** |

ಯೋಜನೆಯ ಅನುಷ್ಠಾನದ ಬಗ್ಗೆ ದಿನಾಂಕ : 03–08–2005, 26–08–2005, 18–04–2006, 12–07–2006 ಮತ್ತು 10–10–2006ಗಳಂದು ಸಂಬಂಧಿತ ಸಂಸ್ಥೆಗಳೊಂದಿಗೆ ಸಭೆಗಳನ್ನು ಏರ್ಪಡಿಸಿ ಚಟುವಟಿಕೆಗಳ ಪ್ರಗತಿ ಪರಿಶೀಲನೆ ಕೈಗೊಳ್ಳಲಾಗಿರುತ್ತದೆ. ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿ ಚಟುವಟಿಕೆಗಳು ಮಾತ್ರಿ ಪ್ರಗತಿಯಲ್ಲಿದ್ದು ಇತರ ಜೀವವೈವಿಧ್ಯ ಸಮೀಕ್ಷೆಗಳೆಲ್ಲವೂ ಮುಗಿದಿದ್ದು ಅಂತಿಮ ವರದಿ ತಯಾರಿಸಲಾಗುತ್ತಿದೆ. ದಿನಾಂಕ :24–03–2007ರಂದು ಆರನೇ ಮತ್ತು ಅಂತಿಮ ಸಭೆಯನ್ನು ಏರ್ಪಡಿಸಿ ಎಲ್ಲಾ ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಗಳಿಂದ ವಿವಿಧ ಸಮೀಕ್ಷಾ ದತ್ತಾಂಶಗಳನ್ನು ಪಡೆದುಕೊಂಡು ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ ಬೆಂಗಳೂರು ಇವರಿಗೆ ಹಸ್ತಾಂತರಿಸಲಾಗಿದ್ದು ಕರಾವಳಿಯ ಜೀವವೈವಿಧ್ಯ ಮಾಹಿತಿ ತಂತ್ರಜಾಲ ರೂಪಿಸಲು ವಿನಂತಿಸಲಾಗಿದೆ. ಪಕ್ಷಿ, ಪತಂಗ, ಒಡೋನೇಟ್ಸ್ ಮತ್ತು ಕರಾವಳಿಯ ಜಲಾವೃತ ಸಸ್ಯ ಮತ್ತು ಪ್ರಾಣಿಸಂಕುಲಗಳ ಅಂತಿಮ ವರದಿಗಳನ್ನು ಪಡೆಯಲಾಗಿದ್ದು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರಿಗೆ ಅಂತಿಮ ವರದಿಗಳನ್ನು ಅತಿ ಶೀಘ್ರದಲ್ಲಿ ಸಲ್ಲಿಸುವಂತೆ ತಿಳಿಸಲಾಗಿದೆ.

**ವಿಷಯ : 5 ವಿಶೇಷ ಆಹ್ವಾನಿತರನ್ನು ಮಂಡಳಿಯ ಸಭೆಗೆ ಆಹ್ವಾನಿಸುವ ಬಗ್ಗೆ**

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಭೆಗಳಲ್ಲಿ ಚರ್ಚಿಸಬಹುದಾದ ವಿಷಯಗಳಲ್ಲಿ ಕೆಲವು ಇಲಾಖೆಗಳ ಮುಖ್ಯಸ್ಥರ ಅಭಿಪ್ರಾಯಗಳು ಅವಶ್ಯಕವಾಗಿರುತ್ತವೆ ಉದಾ : ಕುವೆಂಪು ಜೈವಿಕ ಉದ್ಯಾನವನ ಸ್ಥಾಪನೆಯ ವಿಷಯದಲ್ಲಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳ ಅಭಿಪ್ರಾಯದ ಅವಶ್ಯಕತೆ ಇರುತ್ತದೆ. ಇದೇ ರೀತಿ ಇತರೆ ಇಲಾಖೆಗಳ ವಿಷಯಗಳು ಮಂಡಳಿಯ ಸಭೆಯಲ್ಲಿ ಚರ್ಚಿಸುವ ಸಂದರ್ಭಗಳಲ್ಲಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರ ಅಭಿಪ್ರಾಯ, ಸಲಹೆ ಮತ್ತು ಸೂಚನೆಗಳ ಅವಶ್ಯಕತೆ ಇರುತ್ತದೆ.

ಆದ್ದರಿಂದ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಭೆಗಳಿಗೆ ಈ ಕೆಳಗಿನ ಅಧಿಕಾರಿಗಳನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸಲು ಸೂಕ್ತ ನಿರ್ಣಯ ಕೈಗೊಳ್ಳಲು ಮಂಡಿಸಲಾಗಿದೆ.

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ------- ಅರಣ್ಯ ಇಲಾಖೆ
2. ನಿರ್ದೇಶಕರು, ಮೀನುಗಾರಿಕೆ ------- ಮೀನುಗಾರಿಕಾ ಇಲಾಖೆ
3. ನಿರ್ದೇಶಕರು, ತೋಟಗಾರಿಕೆ ------- ತೋಟಗಾರಿಕೆ ಇಲಾಖೆ
4. ಇನ್ನಿತರೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು

**ವಿಷಯ : 6 ಜೈವಿಕ ಸಂಪನ್ಮೂಲ ಬಳಕೆಯ ಮೇಲೆ ಶುಲ್ಕ ವಿಧಿಸುವ ಬಗ್ಗೆ :**

**ಉದ್ದೇಶಗಳು :**

1. ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರಡಿ ನಿಯಮ 15ರ ಪ್ರಕಾರ ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಬಳಕೆಗೆ ಪಡೆಯುವುದಕ್ಕಾಗಿ ರಾಜ್ಯ ಜೈವಿಕ ವೈವಿಧ್ಯ ಮಂಡಳಿಗೆ ಮುಂಚಿತವಾಗಿ ಪ್ರತಿಯೊಬ್ಬ ವ್ಯಕ್ತಿಯು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಪೂರ್ವಾನುಮತಿ ಅರ್ಜಿಯನ್ನು ಸಲ್ಲಿಸಬೇಕಿರುತ್ತದೆ.
2. ನಿಯಮ 15ರ ಆರನೆಯ ಉಪನಿಯಮವು ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಜೋಪಾನಗೊಳಿಸುವ ಉದ್ದೇಶಕ್ಕಾಗಿ ಅವುಗಳನ್ನು ಹೊಂದಲು/ಸಂಗ್ರಹಿಸಲು ಮಂಜೂರಾತಿಯನ್ನು ನೀಡುವ ಮೊದಲು ಆಯಾ ಉದ್ದೇಶಕ್ಕಾಗಿ ವಿಶೇಷ ನಿಬಂಧನೆಗಳನ್ನು ವಿಧಿಸಬಹುದಾಗಿದೆ.
3. ರಾಜ್ಯದ ಜೈವಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ ಮತ್ತು ಅವುಗಳ ದುರ್ಬಳಕೆ ತಡೆಯಲು ಅಥವಾ ನಿರ್ಬಂಧ ಹೇರುವ ನಿಟ್ಟಿನಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಜೈವಿಕವೈವಿಧ್ಯ ಅಧಿನಿಯಮ 2002ರ ನಿಯಮ 15ರಡಿ ವಿವಿಧ ಜೈವಿಕ ಸಂಪನ್ಮೂಲಗಳ ಬಳಕೆಯ ಮೇಲೆ ಶುಲ್ಕವನ್ನು ಸಂಗ್ರಹಿಸಲು ಉದ್ದೇಶಿಸಲಾಗಿದೆ.
4. ಈ ಶುಲ್ಕವನ್ನು ಆಯಾ ಪ್ರದೇಶದ ಜೀವವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಯ ಉದ್ದೇಶಗಳಿಗಾಗಿ ಮರು ಬಳಕೆ ಮಾಡಬಹುದಾಗಿದೆ.
5. ಸೆಸ್/ಶುಲ್ಕವನ್ನು ಯಾವುದಾದರೂ ತೆರಿಗೆ (ಉದಾ : ಮಾರಾಟ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಕೇಂದ್ರಿಯ ಅಬಕಾರಿ ತೆರಿಗೆ ಇತ್ಯಾದಿಗಳನ್ನು) ವಸೂಲು ಮಾಡುವಾಗ ಇಂತಿಷ್ಟು ಪ್ರಮಾಣ (2–5%)ದಷ್ಟು ಜೀವವೈವಿಧ್ಯ ಶುಲ್ಕ/ಸೆಸ್ ಎಂದು ಆಚರಣೆಗೊಳಿಸಬಹುದಾಗಿದೆ.

**ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ ಹಾಗೂ ಪ್ರಾರಂಭ :**

1. ಈ ಶುಲ್ಕವನ್ನು ಕರ್ನಾಟಕ ಜೈವಿಕವೈವಿಧ್ಯ ಶುಲ್ಕ (ಏಚಿಡಿಟಚಿಣಚಿಞಚಿ ಃಂಜುತಜಢುಣಥಿ ಅಞ, 2007) ಎಂದು ಕರೆಯಬಹುದಾಗಿದೆ.
2. ಈ ಶುಲ್ಕದ ವ್ಯಾಪ್ತಿಯು ರಾಜ್ಯದ ಎಲ್ಲಾ ಜೈವಿಕ ಸಂಪನ್ಮೂಲಗಳಿಗೆ ಅನ್ವಯಿಸುತ್ತದೆ. ಮೊದಲ ಹಂತದಲ್ಲಿ ಅನುಬಂಧ–4ರಲ್ಲಿ ನಮೂದಿಸಿರುವ ಸಂಪನ್ಮೂಲಗಳಿಗೆ ಅನ್ವಯಗೊಳ್ಳುತ್ತದೆ.
3. ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದ ತರುವಾಯದಲ್ಲಿ ಜೈವಿಕ ಸಂಪನ್ಮೂಲಗಳ ಮೇಲೆ ಈ ಶುಲ್ಕ ಹೇರಬಹುದಾಗಿದೆ. ಕೆಲವು ಪ್ರಾಸಂಗಿಕ ಉಪಬಂಧಗಳನ್ನು ಕಲ್ಪಿಸಿ ಶುಲ್ಕದ ಪರಿಭಾಷೆ ಮತ್ತು ವ್ಯಾಪ್ತಿಯನ್ನು ನಿರ್ದಿಷ್ಟಗೊಳಿಸಬಹುದಾಗಿದೆ.
4. ಸಮಗ್ರ ಕರ್ನಾಟಕಕ್ಕೆ ಈ ಶುಲ್ಕ ಹೇರುವಿಕೆ ಅನ್ವಯವಾಗುತ್ತದೆ. ಆದರೆ ಅಂತರ ರಾಜ್ಯ ವ್ಯಾಪಾರ ಕ್ರಮದಲ್ಲಿ ರಾಜ್ಯದೊಳಗೆ ಪ್ರವೇಶಿಸುವ ಜೈವಿಕ ಸಂಪನ್ಮೂಲ ಸರಕುಗಳಿಗೆ ಸಹ ಶುಲ್ಕ ವಿಧಿಸಲು ಅವಕಾಶ ಕಲ್ಪಿಸಬಹುದಾಗಿದೆ.

ಈ ಬಗ್ಗೆ ಸಭೆಯು ಚರ್ಚಿಸಿ ಅನುಷ್ಠಾನಗೊಳಿಸುವ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಮಂಡಿಸಲಾಗಿದೆ.

**ವಿಷಯ : 7 ರಾಜ್ಯದ ಜೀವವೈವಿಧ್ಯ ಬಗ್ಗೆ ಅಧ್ಯಯನ ಸಂಶೋಧನೆ ಸಮೀಕ್ಷೆ ದಾಖಲೀಕರಣ ಮತ್ತು ಸಂರಕ್ಷಣೆಗಾಗಿ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ :**

ಮಂಡಳಿಯ ಕಾರ್ಯಚಟುವಟಿಕೆಗಳ ಅನುಷ್ಠಾನ, ಮೂಲಭೂತ ಸೌಕರ್ಯಗಳಿಗೆ ಬೇಕಾಗುವ ಅನುದಾನ ಮತ್ತು ಸಿಬ್ಬಂದಿ ಹಾಗೂ ಕಛೇರಿ ವೆಚ್ಚಗಳಿಗೆ ತಗಲಬಹುದಾದ ವಿವರವಾದ ಮಾಹಿತಿಗಳೊಂದಿಗೆ ಪ್ರಸ್ತಾವನೆಯೊಂದನ್ನು ತಯಾರಿಸಿ ತಮಗೆ ಸಲ್ಲಿಸಿದಲ್ಲಿ ಮಾನ್ಯ ಮುಖ್ಯಮಂತ್ರಿ ಹಾಗೂ ಆರ್ಥಿಕ ಸಚಿವರನ್ನು ಖುದ್ದಾಗಿ ಭೇಟಿ ಮಾಡಿ ಅನುದಾನ ದೊರಕಿಸಿ ಕೊಡುವ ಬಗ್ಗೆ ಪ್ರಯತ್ನಿಸುವುದಾಗಿ ತಿಳಿಸಿದರು/ಮಾನ್ಯ ಸಚಿವರು ಈ ಎಲ್ಲಾ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ

ಸರ್ಕಾರದಿಂದಲೇ ಅನುದಾನ ಒದಗಿಸುವ ಬಗ್ಗೆ ಮುಂದಿನ ಆಯವ್ಯಯದಲ್ಲಿ ಈ ಬಗ್ಗೆ ಅಡಕಗೊಳಿಸಲು ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿರುತ್ತದೆ. ಇದರನ್ವಯ ಜನತಾ ಜೀವವೈವಿಧ್ಯ ದಾಖಲಾತಿ ಕಾರ್ಯಕೈಗೊಂಡು ಅನುಭವವಿರುವ ಹಾಗೂ ಆಸಕ್ತಿವಹಿಸಿರುವ ಕೆಲವು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳ ಸಭೆಯನ್ನು ದಿನಾಂಕ : 30–11–2006ರಂದು ನಡೆಸಿ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಹಮ್ಮಿಕೊಳ್ಳಬಹುದಾದ ಕಾರ್ಯಯೋಜನೆಗಳನ್ನು ಸಿದ್ಧಪಡಿಸಿರುವುದಾಗಿ ತಿಳಿಸಿರುತ್ತಾರೆ. ಅದರಂತೆ

ಅ) ಮಂಡಳಿಯು 6 ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ತುಮಕೂರು, ಹಾವೇರಿ, ಹಾಸನ, ಚಿಕ್ಕಮಗಳೂರು, ದಾವಣಗೆರೆ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲು ಮತ್ತು ಆಯ್ದ 30 ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಜನತಾ ಜೀವವೈವಿಧ್ಯ ದಾಖಲಾತಿ ಕಾರ್ಯವನ್ನು ರೂ.21.00 ಲಕ್ಷ ವೆಚ್ಚದಲ್ಲಿ ಎರಡು ವರ್ಷಗಳಲ್ಲಿ ಹಮ್ಮಿಕೊಳ್ಳಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ :ಅಪಜೀ 24 ಇಎನ್‌ವಿ 2007, ಬೆಂಗಳೂರು, ದಿನಾಂಕ :09–02–2007ರಲ್ಲಿ ಪಡೆಯಲಾಗಿರುತ್ತದೆ (ಅನುಬಂಧ–5). ರಾಜ್ಯ ಸರ್ಕಾರವು 2006–07ನೇ ಸಾಲಿನಲ್ಲಿ ಮಂಡಳಿಗೆ ರೂ.7.39 ಲಕ್ಷ ಅನುದಾನವನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿರುವುದರಿಂದ ಸದರಿ ಯೋಜನೆಯನ್ನು ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ವಿಸ್ತರಿಸಲಾಗಿದ್ದು ಸದಸ್ಯ ಕಾರ್ಯದರ್ಶಿಯವರ ಈ ಕ್ರಮವನ್ನು ದೃಡೀಕರಣಕ್ಕಾಗಿ ಸಭೆಗೆ ಮಂಡಿಸಲಾಗಿದೆ.

ಆ) ಜೀವವೈವಿಧ್ಯ ಕಾಯ್ದೆ, 2002ರ ಪ್ರಕಾರ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಿ ಅವುಗಳ ಮೂಲಕ ಜನತಾ ಜೀವವೈವಿಧ್ಯ ದಾಖಲಾತಿ, ಜೀವವೈವಿಧ್ಯದ ಬಗ್ಗೆ ಸಂಬಂಧಿತರಿಗೆ ತಿಳುವಳಿಕೆ ಹಾಗೂ ಕೌಶಲ್ಯವೃದ್ಧಿಸುವುದು ಅಧ್ಯಯನ, ಸಂಶೋಧನೆ, ಸಮೀಕ್ಷೆ ಕೈಗೊಂಡು ದಾಖಲೀಕರಣಗೊಳಿಸುವುದಲ್ಲದೆ ಅತೀ ವಿಶಿಷ್ಟ ಜೀವವೈವಿಧ್ಯ ತಾಣಗಳನ್ನು ಇರುನೆಲೆ ಹಾಗೂ ಹೊರನೆಲೆಯ ರೂಪದಲ್ಲಿ ಸಂರಕ್ಷಿಸುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮಂಡಳಿಯು ರೂ.5.00 ಕೋಟಿ ಮೊತ್ತ ಯೋಜನಾ ಪ್ರಸ್ತಾವನೆಯನ್ನು ತಯಾರಿಸಿದ್ದು ವಿವರಗಳನ್ನು ಅನುಬಂಧ–6ರಲ್ಲಿ ನೀಡಲಾಗಿದೆ.

ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಭೆಯು ಮಂಜೂರಾತಿ ನೀಡುವುದಲ್ಲದೆ ಹಣಕಾಸಿನ ನೆರವು ಪಡೆಯುವ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲು ಮಂಡಿಸಲಾಗಿದೆ.

**ವಿಷಯ : 8 ಮೀನುಗಳ ಅಧ್ಯಯನ ಮತ್ತು ಸಂರಕ್ಷಣೆಯ ಯೋಜನಾ ಪ್ರಸ್ತಾವನೆಗಳು :**

1. ನಿಷೇಧಿಸಲಾದ ಆಫ್ರಿಕಾದ ಅಣೆಮೀನಿನ ಸ್ಥಿತಿಗತಿ ಹಾಗೂ ಇದರಿಂದ ಸ್ಥಳೀಯ ಮೀನುಗಳ ನಾಶವಾಗುತ್ತಿರುವ ಕುರಿತು ಅಧ್ಯಯನ ಕೈಗೊಳ್ಳುವ ಬಗ್ಗೆ :

ಕಾರ್ಯದರ್ಶಿ, ಸೊಸೈಟಿ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಅಕ್ವಾಕಲ್ಚರ್, ಬೆಂಗಳೂರು ಇವರು ಭಾರತ ಸರ್ಕಾರವು ನಿಷೇಧಿಸಿರುವ ಆಫ್ರಿಕಾದ ಅಣೆಮೀನು ಅತೀ ಶೀಘ್ರವಾಗಿ ಬೆಳೆಯುವುದರಿಂದ ರಾಜ್ಯದ ವಿವಿಧೆಡೆ ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಮೀನನ್ನು ಬೆಳೆಸುತ್ತಿದ್ದು ಇವು ಈಗ ನದಿ ಹಾಗೂ ಜಲಾಶಯಗಳನ್ನು ಸೇರಿವೆಯೆಂದು ಇದರಿಂದ ಸ್ಥಳೀಯ ಮತ್ಸ್ಯ ಪ್ರಭೇದಗಳು ನಾಶವಾಗುತ್ತಿರುವ ಬಗ್ಗೆ ತಿಳಿಸುತ್ತಾ ಈ ಬಗ್ಗೆ ವಿವರವಾಗಿ ಅಧ್ಯಯನ ಕೈಗೊಳ್ಳಬೇಕಾಗಿದೆಯೆಂದು ಯೋಜನಾ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

**ಈ ಪ್ರಸ್ತಾವನೆಯ ಉದ್ದೇಶಗಳು ಹೀಗಿವೆ :**

1. ರಾಜ್ಯದ ವಿವಿಧ/ಪ್ರಮುಖ ಕೆರೆ, ನದಿ ಹಾಗೂ ಜಲಾಶಯಗಳಲ್ಲಿ ಈ ಮೀನು ಪಸರಿಸಿರುವ ಬಗ್ಗೆ ಸಮೀಕ್ಷೆ ಕೈಗೊಳ್ಳುವುದು.
2. ಈ ಮೀನಿನ ಆಹಾರ, ವಂಶಾಭಿವೃದ್ಧಿ–ಜೀವಶಾಸ್ತ್ರದ ಬಗ್ಗೆ ಅಧ್ಯಯನ.
3. ಸ್ಥಳೀಯ ಮೀನುಗಳ ಹಿಡುವಳಿ ಪ್ರಮಾಣಕ್ಕನುಗುಣವಾಗಿ ಅಣೆಮೀನಿನ ಹಿಡುವಳಿಯನ್ನು ತಾಳೆ ಮಾಡುವುದು.

4. ಅಣೆ ಮೀನಿನ ಪ್ರಭಾವದಿಂದ ಸ್ಥಳೀಯ ಮೀನುಗಳ ಪ್ರಭೇದಗಳಲ್ಲಾದ ಬದಲಾವಣೆ ಹಾಗೂ ನಶಿಸುವಂತೆ ಅಧ್ಯಯನ.
5. ಅಣೆಮೀನಿನ ಕೃಷಿಯನ್ನು/ಪಸರಿಸುವಿಕೆಯನ್ನು ತಡೆಗಟ್ಟುವ ಬಗ್ಗೆ ವಿವಿಧೋಪಾಯಗಳನ್ನು ಸೂಚಿಸುವುದು.

ಈ ಮೇಲಿನ ಅಧ್ಯಯನವನ್ನು 18 ತಿಂಗಳುಗಳ ಕಾಲ ಕೈಗೊಳ್ಳಲಾಗುವುದೆಂದು ಒಟ್ಟು ರೂ.2.80 ಲಕ್ಷ ಅನುದಾನವನ್ನು ಮಂಜೂರಾತಿಗೆ ಕೋರಿರುತ್ತಾರೆ. ಈ ಅಧ್ಯಯನ ಕೈಗೊಳ್ಳುವುದು ಅತೀ ಅವಶ್ಯಕವಾಗಿರುವುದರಿಂದ ಮಂಜೂರು ಮಾಡುವ ಬಗ್ಗೆ ಮತ್ತು 2006-07ರ ಸಾಲಿನಲ್ಲಿ ಮಂಡಳಿಗೆ ಬಿಡುಗಡೆಮಾಡಲಾದ ಅನುದಾನದಲ್ಲಿ ರೂ.1.50 ಲಕ್ಷ ಬಿಡುಗಡೆಗೊಳಿಸುವ ಬಗ್ಗೆ ಸಭೆಗೆ ಮಂಡಿಸಲಾಗಿದೆ.

**2. ಪಶ್ಚಿಮಘಟ್ಟಗಳ ತುಂಗಾ ನದಿಯಲ್ಲಿ ಮತ್ಸ್ಯವೈವಿಧ್ಯ ಅಧ್ಯಯನ ಕೈಗೊಳ್ಳುವ ಬಗ್ಗೆ :**

ಕುವೆಂಪು ವಿಶ್ವವಿದ್ಯಾಲಯದ ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗದ ಉಪನ್ಯಾಸಕರಾದ ಡಾ||.ಎಂ.ವೆಂಕಟೇಶ್ವರಲು ಪಶ್ಚಿಮಘಟ್ಟದ ತುಂಗಾನದಿಯಲ್ಲಿಯ ಮತ್ಸ್ಯವೈವಿಧ್ಯತೆ, ನಶಿಸುತ್ತಿರುವ ಪ್ರಭೇದಗಳು ಹಾಗೂ ಅಪಾಯಕ್ಕೊಳಗಾಗಿರುವ ಮೀನು ಮತ್ತು ಅವುಗಳ ಪರಿಸರ ಸಂರಕ್ಷಣೆ ಕುರಿತು ಒಂದು ವರ್ಷದ ಅಧ್ಯಯನವನ್ನು ರೂ.2,87,980 ವೆಚ್ಚದಲ್ಲಿ ಕೈಗೊಳ್ಳಲು ಪ್ರಸ್ತಾವಿಸಿರುತ್ತಾರೆ. ಪಶ್ಚಿಮಘಟ್ಟಗಳಲ್ಲಿ ದಾಖಲಿಸಲಾದ 218 ಮತ್ಸ್ಯಪ್ರಭೇದಗಳಲ್ಲಿ ಪ್ರತಿಶತ 52 ರಷ್ಟು ಅಂದರೆ 114 ಪ್ರಭೇದಗಳು ಸ್ಥಾನೀಯವಾಗಿದ್ದು ಹಲವಾರು ಪ್ರಭೇದಗಳು ನಾಶದ ಅಂಚಿನಲ್ಲಿವೆಯೆಂದು ತಿಳಿದು ಬಂದಿರುವುದರಿಂದ ಹಾಗೂ ತುಂಗಾನದಿಯಲ್ಲಿಯ ಮತ್ಸ್ಯವೈವಿಧ್ಯ ಬಗ್ಗೆ ವಿಸ್ತೃತ ವೈಜ್ಞಾನಿಕ ವರದಿ ಕೈಗೊಂಡಿರುವುದಿಲ್ಲ. ಆದ್ದರಿಂದ ಈ ಅಧ್ಯಯನದಲ್ಲಿ ಮೀನುಗಳ ಅವಾಸಸ್ಥಾನಗಳು, ಸಾಂದ್ರೀಕೃತಗೊಳ್ಳುವಿಕೆ ಮತ್ತು ಅಪಾಯಕ್ಕೊಳಗಾಗಿರುವ ಪ್ರಭೇದಗಳು ಹಾಗೂ ಕಾರಣಗಳೊಂದಿಗೆ ಯಾವರೀತಿಯ ಸಂರಕ್ಷಣಾ ಕ್ರಮಗಳನ್ನು ಹಮ್ಮಿಕೊಳ್ಳಬಹುದು ಎನ್ನುವುದರ ಬಗ್ಗೆ ಅಧ್ಯಯನ ಮಾಡಲಾಗುವುದೆಂದು ಈ ಯೋಜನೆಗೆ ಮಂಡಳಿಯ ಮಂಜೂರಾತಿಯನ್ನು ಕೋರಿರುತ್ತಾರೆ. ಪಶ್ಚಿಮ ಘಟ್ಟಗಳು ಜಗತ್ತಿನ ಅತೀ ವಿಶಿಷ್ಟ ಜೀವವೈವಿಧ್ಯ ತಾಣಗಳೆಂದು ಗುರುತಿಸಿರುವುದರಿಂದ ಹಾಗೂ ತುಂಗಾನದಿಯ ಮತ್ಸ್ಯವೈವಿಧ್ಯ ಕುರಿತು ವಿಸ್ತೃತವಾದ ಅಧ್ಯಯನ ಕೈಗೊಂಡಿರದ ಕಾರಣ ಈ ಅಧ್ಯಯನ ಕೈಗೊಳ್ಳುವುದು ಸೂಕ್ತವಾಗಿರುವುದರಿಂದ ರೂ.2,25,000ದ ಪರಿಷ್ಕೃತ ಯೋಜನೆಗೆ ಮಂಜೂರಾತಿ ನೀಡುವ ಬಗ್ಗೆ ಮತ್ತು 2006-07ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಂಡಳಿಗೆ ಬಿಡುಗಡೆಮಾಡಿರುವ ಅನುದಾನದಲ್ಲಿ ರೂ.1.00 ಲಕ್ಷ ಹಾಗೂ 2007-08ನೇ ಸಾಲಿನಲ್ಲಿ ಉಳಿದ ರೂ.1,25,000 ಬಿಡುಗಡೆಗೊಳಿಸುವ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲು ಸಭೆಗೆ ಮಂಡಿಸಲಾಗಿದೆ.

**3. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಪರಿಹರಪುರ ಮತ್ಸ್ಯಧಾಮದ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಗಳ ಯೋಜನೆಗೆ ಮಂಜೂರಾತಿ ನೀಡುವ ಬಗ್ಗೆ**

ರಾಜ್ಯದ ಜಲಸಂಪನ್ಮೂಲಗಳಾದ ನದಿ, ಕೆರೆ, ಕೊಳ, ಸರೋವರ ಮತ್ತು ಜಲಾಶಯಗಳಲ್ಲಿ ಸಮೃದ್ಧಿಯಾಗಿ ಮತ್ತು ಹೇರಳವಾಗಿ ದೊರಕುತ್ತಿದ್ದ ಮಹಶೀರ್ ಹಾಗೂ ಇನ್ನಿತರ ಸ್ಥಳೀಯ ಮತ್ಸ್ಯಪ್ರಭೇದಗಳ ಸಂತತಿ ವಿನಾಶದ ಅಂಚಿಗೆ ತಲುಪುವ ಸ್ಥಿತಿಯಲ್ಲಿದ್ದು ಇವುಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ನದಿಗಳ ಕೆಲವು ಭಾಗಗಳನ್ನು ಮತ್ಸ್ಯಧಾಮಗಳನ್ನಾಗಿ ರಕ್ಷಿಸಿ ಅಭಿವೃದ್ಧಿ ಪಡಿಸುವುದು ಅತ್ಯಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ :ಪಸಂಮಿ/266/ಮೀಇಇ/2005, ದಿನಾಂಕ :01-04-2006ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹರಿಹರಪುರದ ಶ್ರೀ.ನೀಲಕಂಠೇಶ್ವರ ದೇವಸ್ಥಾನ ಮತ್ತು ಶ್ರೀ ಮಠದ ಬಳಿಯ ತುಂಗಾನದಿಯ ಪ್ರದೇಶವನ್ನು ಮತ್ಸ್ಯಧಾಮವೆಂದು ಘೋಷಿಸಿರುತ್ತದೆ.

ಈ ಪ್ರದೇಶದಲ್ಲಿ ಮಹಶೀರ್, ಹರಗಿ ಮತ್ತು ಇತರ ಸ್ಥಳೀಯ ಮೀನುಗಳು ನೆಲೆಗೊಂಡಿದ್ದು ಶ್ರೀ ಮಠದ ಹಾಗೂ ದೇವಸ್ಥಾನದ ಭಕ್ತಾದಿಗಳಿಂದ ರಕ್ಷಿಸಲ್ಪಡುತ್ತಾ ಸಂತಾನೋತ್ಪತ್ತಿ ಹೊಂದುತ್ತಿವೆ. ಈ ಮೀನುಗಳನ್ನು ರಕ್ಷಿಸಲು ಮತ್ತು ಮತ್ಸ್ಯಧಾಮವನ್ನು ಅಭಿವೃದ್ಧಿಪಡಿಸಿ ಪ್ರೇಕ್ಷಕರಿಗೆ ಪ್ರವಾಸಿ ತಾಣವಾಗಿ ಮಾರ್ಪಡಲು ಮೀನುಗಾರಿಕಾ ನಿರ್ದೇಶಕರು, ಬೆಂಗಳೂರು ಇವರು ರೂ.5.00 ಲಕ್ಷ ವೆಚ್ಚದ ಯೋಜನೆಯನ್ನು ಅವರ ಪತ್ರ ಸಂಖ್ಯೆ :ಆರ್ಎಸ್ಹೆಚ್/31/2004-05, ದಿನಾಂಕ : 06-12-2006ರಲ್ಲಿ ಮಂಜೂರಾತಿಗಾಗಿ ಮಂಡಳಿಗೆ ಕಳುಹಿಸಿರುತ್ತಾರೆ.

**ಯೋಜನೆಯಲ್ಲಿ ಪ್ರಸ್ತಾವಿಸಿರುವ ಕಾರ್ಯಕ್ರಮಗಳು ಹಾಗೂ ಅವುಗಳಿಗೆ ತಗಲುವ ಅಂದಾಜು ವೆಚ್ಚ ಈ ಕೆಳಗಿನಂತಿರುತ್ತವೆ.**

| ಕ್ರ.ಸಂ. | ಕಾರ್ಯಕ್ರಮ | ಅಂದಾಜು ಮೊತ್ತ (ರೂ.ಗಳಲ್ಲಿ) |
|---|---|---|
| 1 | ಮೀನುಗಳ ವೀಕ್ಷಣೆಗಾಗಿ ಸೋಪಾನಗಳನ್ನು ಹಾಗೂ ಭಾವಣಿಯನ್ನು ನಿರ್ಮಿಸುವ ಕಾಮಗಾರಿ | 2,50,000 |
| 2 | ಪ್ರಚಾರ ಮತ್ತು ಸೂಚನಾ ಫಲಕಗಳು (ಬೋರ್ಡ್‌ಗಳು) | 50,000 |
| 3 | ಮತ್ಸ್ಯ ಸಂಕುಲಕ್ಕೆ ಅಗತ್ಯವಾದ ಪ್ರೋಟೀನ್‌ಯುಕ್ತ ಆಹಾರ ತಯಾರಿಸಿ ಒದಗಿಸುವುದು | 1,00,000 |
| 4 | ಮತ್ಸ್ಯಧಾಮದ ಪ್ರಚಾರಕ್ಕೆ ಅಗತ್ಯವಾದ ಹ್ಯಾಂಡ್‌ಬಿಲ್, ವಿಡಿಯೋ ಸಿಡಿ ಇತ್ಯಾದಿಗಳ ತಯಾರಿಗಾಗಿ | 50,000 |
| 5 | ಮತ್ಸ್ಯಧಾಮದ ಕುರಿತು ಜನರಲ್ಲಿ ತಿಳುವಳಿಕೆ ಮೂಡಿಸಲು ಅಗತ್ಯವಾದ ತರಬೇತಿ/ವಿಚಾರಗೋಷ್ಠಿ ಕಾರ್ಯಾಗಾರಗಳನ್ನು ಏರ್ಪಡಿಸುವುದು | 50,000 |
| | **ಒಟ್ಟು** | **5,00,000** |

ಹರಿಹರಪುರ ಮತ್ಸ್ಯಧಾಮದಲ್ಲಿಯ ಸ್ಥಳೀಯ ಮೀನುಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಅತೀ ಅವಶ್ಯವಾಗಿರುವುದರಿಂದ ಮೀನುಗಾರಿಕಾ ನಿರ್ದೇಶಕರು, ಬೆಂಗಳೂರು ಇವರು ಪ್ರಸ್ತಾವಿಸಿರುವ ಯೋಜನೆ ಅತ್ಯಂತ ಉಪಯುಕ್ತವಾಗಿರುವುದರಿಂದ ರೂ.5.00 ಲಕ್ಷ ಮಂಜೂರಾತಿ ಹಾಗೂ 2006-07ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಂಡಳಿಗೆ ಬಿಡುಗಡೆಮಾಡಿರುವ ಅನುದಾನದಲ್ಲಿ ರೂ.2.50 ಲಕ್ಷ ಹಾಗೂ 2007-08ನೇ ಸಾಲಿನಲ್ಲಿ ರೂ.2.50 ಲಕ್ಷ ಬಿಡುಗಡೆಗೊಳಿಸುವ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲು ಸಭೆಗೆ ಮಂಡಿಸಲಾಗಿದೆ.

**ವಿಷಯ : 9 ಉತ್ತರ ಕನ್ನಡ ಜಿಲ್ಲೆಯ ಜನಾಂಗ ತಳಿ ವೈವಿಧ್ಯ, ಭೂ ಸಂತತಿ ಸಂರಕ್ಷಣೆಯ ಸಾಂಪ್ರದಾಯಕ ಜ್ಞಾನದ ಜೀವವೈವಿಧ್ಯ ಮಾಹಿತಿಯ ದತ್ತಾಂಶ ತಯಾರಿ-ಕಿರು ಸಂಶೋಧನಾ ಯೋಜನೆ**

ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರ ನಿಯಮ 13(6)ರಡಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಉದ್ದೇಶಿತ ಅಧ್ಯಾಯನಗಳನ್ನು ಆಯೋಜಿಸುವುದು ಮತ್ತು ಪರಿಶೋಧನೆ ಹಾಗೂ ಸಂಶೋಧನೆಗಳನ್ನು ಪ್ರಾಯೋಜಿಸುವುದು ಮತ್ತು (11) ರಡಿ ಜೈವಿಕ ಸಂಪನ್ಮೂಲಗಳ ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನದ ಪರಿಣಾಮಕಾರಿ ನಿರ್ವಹಣೆ, ಪ್ರವರ್ಧನೆ ಮತ್ತು ಸ್ಥಿರ ಬಳಕೆಯಾಗುವಂತೆ ಮಾಡಲು ಜೈವಿಕ ವೈವಿಧ್ಯ ರಿಜಿಸ್ಟರ್‌ಗಳು ಮತ್ತು ವಿದ್ಯುನ್ಮಾನ ದತ್ತಾಂಶ ಆಧಾರಗಳ ಮೂಲಕ ಜೈವಿಕ ಸಂಪನ್ಮೂಲಗಳಿಗೆ ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನಕ್ಕೆ ದತ್ತಾಂಶದ ಆಧಾರವನ್ನು ನಿರ್ಮಿಸಲು ಮತ್ತು ಮಾಹಿತಿ ಮತ್ತು ದಸ್ತಾವೇಜೀಕರಣ ವ್ಯವಸ್ಥೆಯನ್ನು ಸೃಜಿಸಲು ಕ್ರಮತೆಗೆದುಕೊಳ್ಳುವುದು.

ಮೇಲಿನ ನಿಯಮಗಳ ಅನ್ವಯ **ಉತ್ತರ ಕನ್ನಡ ಜಿಲ್ಲೆಯ ಜನಾಂಗ ತಳಿ ವೈವಿಧ್ಯ, ಭೂ ಸಂತತಿ ಸಂರಕ್ಷಣೆಯ ಸಾಂಪ್ರದಾಯಕ ಜ್ಞಾನದ ಜೀವ ಮಾಹಿತಿ ದತ್ತಾಂಶಕಿ** ಗ ಕಿರು ಸಂಶೋಧನಾ ಯೋಜನೆಯು ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳಾದ ಸಿದ್ದಿ, ಕುಣಬಿ, ಗೌಳಿ, ಗ್ರಾಮ ಒಕ್ಕಲಿಗ ಮತ್ತು ಕಾರೆ ಒಕ್ಕಲಿಗರ ಸಾಂಪ್ರದಾಯಿಕ ತಳಿಗಳ ಮತ್ತು ಭೂ ಸಂತತಿಯ ವೈವಿಧ್ಯ ಸಂರಕ್ಷಣೆ ಮತ್ತು ಜೀವವೈವಿಧ್ಯ ಸಂಬಂಧಿತ ಸಾಂಪ್ರದಾಯಿಕ ಜ್ಞಾನದ ಬಗ್ಗೆ ಬೆಳಕು ಚೆಲ್ಲುವುದಲ್ಲದೆ, ಅವುಗಳ ಸಂರಕ್ಷಣೆಯ ವಿಧಿ ವಿಧಾನಗಳ ಮತ್ತು ವಾಣಿಜ್ಯ ಬಳಕೆ ಬಗ್ಗೆ ಮಂಡಳಿಯ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಅನುವಾಗುತ್ತದೆ. ಈ ದತ್ತಾಂಶವನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಮಾಹಿತಿ ವ್ಯವಸ್ಥೆಗೆ ಅಳವಡಿಸಬಹುದು ಹಾಗೂ ಮಂಡಳಿಯ ಇತರ ಅಧ್ಯಯನಗಳಿಗೆ ಮಾದರಿಯಾಗುತ್ತದೆ. ಒಂದು ವರ್ಷ ಯೋಜನಾ ಅವಧಿಯ ಒಟ್ಟು ವೆಚ್ಚ ರೂ.1,91,000/- (*ರೂ.ಒಂದು ಲಕ್ಷದ ತೊಂಬತ್ತೊಂದು ಸಾವಿರ ಮಾತ್ರ*) ವೆಚ್ಚದ ವಿವರ ಕೆಳಕಾಣಿಸಿದೆ.

**ಅಂದಾಜು ಯೋಜನಾ ವೆಚ್ಚ :**

| | |
|---|---|
| 1. ಓರ್ವ ಪ್ರಾಜೆಕ್ಟ್ ಫೆಲೊ ಮಾಹೆಯಾನ ಸಂಚಿತ ಮೊತ್ತ ರೂ.800012 ತಿಂಗಳು | |
| (ಒಂದು ವರ್ಷದ ಅವಧಿಗೆ ಮಾತ್ರ) | 96,000/- |
| 2. ಅಧ್ಯಯನ ಕ್ಷೇತ್ರ ಪ್ರವಾಸ (ಪ್ರಯಾಣ/ದಿನಭತ್ಯೆ) | 25,000/- |
| 3. ಪುಸ್ತಕಗಳು/ನಿಯತಕಾಲಿಕೆಗಳು, ಆಧಾರ ಗ್ರಂಥಗಳು | 15,000/- |
| 4. ಡಿಜಿಟಲ್ ಕ್ಯಾಮರಾ ಮತ್ತು ಅಸೆಸರಿಸ್ | 15,000/- |
| 5. ಡೆಲ್ಟಾ ಸಾಫ್ಟ್‌ವೇರ್, ಸಿಡಿಸ್, ಲೇಖನ ಸಾಮಗ್ರಿಗಳು | 20,000/- |
| 6. ತಾಂತ್ರಿಕ ವರದಿ ತಯಾರಿಕೆ | 10,000/- |
| 7. ಸಾದಿಲ್ವಾರು ವೆಚ್ಚಗಳು | 10,000/- |
| (*ರೂ.ಒಂದು ಲಕ್ಷದ ತೊಂಬತ್ತೊಂದು ಸಾವಿರ ಮಾತ್ರ*) **ಒಟ್ಟು ಮೊತ್ತ** | 1,91,000/- |

ಆದುದರಿಂದ, ಸಂಶೋಧನಾ ಯೋಜನೆಯು ಪ್ರಸ್ತಾವನೆಯನ್ನು ಮಂಡಳಿಯ ಒಪ್ಪಿಗೆಗಾಗಿ ಮಂಡಿಸಿದೆ.

**ವಿಷಯ:10. ಜೀವ ವೈವಿಧ್ಯಕ್ಕೆ ಸಂಬಂಧಿಸಿದಂತೆ ಮಂಡಳಿಯಿಚಿದ 7 ಯೋಜನೆಗಳನ್ನು ವಿವಿಧ ದಾನಿ ಸಂಸ್ಥೆಗಳಿಗೆ ಕಳುಹಿಸಿರುವ್ಯದನ್ನು ಅನುಮೋದಿಸುವ ಬಗ್ಗೆ :**

ಜೀವವೈವಿಧ್ಯಕ್ಕೆ ಸಂಬಂಧಿಸಿದಂತೆ ಮಂಡಳಿಯಿಂದ 7 ಯೋಜನೆಗಳನ್ನು ವಿವಿಧ ದಾನಿ ಸಂಸ್ಥೆಗಳಿಗೆ ಕಳುಹಿಸಲಾತರುತ್ತದೆ. ವಿವರಗಳನ್ನು ಅನುಬಂಧ-7 ರಲ್ಲಿ ನೀಡಲಾಗಿರುತ್ತದೆ. ಮಂಡಳಿಯ ಗಮನಕ್ಕೆ ತರಲಾಗಿದೆ.

**ವಿಷಯ :11. 2007-08ನೇ ಸಾಲಿನ ಮಂಡಳಿಯ ಆಯವ್ಯಯ ಅನುಮೋದಿಸುವ ಬಗ್ಗೆ :**

ಕರ್ನಾಟಕ ಜೀವವೈವಿಧ್ಯ ಮಂಡಳಿಗೆ 2006-07ರಲ್ಲಿ ರೂ.40.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು ಬಿಡುಗಡೆಗೊಳಿಸಲಾಗಿರುತ್ತದೆ. ಹಾಗೂ ಮಂಡಳಿಯ ಯೋಜನೆಗಳ ಅನುಷ್ಠಾನಕ್ಕಾಗಿ ಹೆಚ್ಚುವರಿಯಾಗಿ ರೂ.17.39 ಲಕ್ಷಗಳನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ 2007-08ರ ಸಾಲಿನಲ್ಲಿ ಸರ್ಕಾರಕ್ಕೆ ರೂ.75.58 ಲಕ್ಷಗಳ ಬೇಡಿಕೆಯನ್ನು ಸಲ್ಲಿಸಲಾಗಿತ್ತು. ಆದರೆ ಅದನ್ನು ಈ ಕೆಳಕಂಡ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲು ಪರಿಷ್ಕರಿಸಲಾಗಿದೆ.

| | | 2006-07 | | 2007-08 | |
|---|---|---|---|---|---|
| 1 | ಅಧಿಕಾರಿಗಳ ವೇತನ | | 1,833,458 | | 2,500,000 |
| 2 | ಸಿಬ್ಬಂದಿ ವರ್ಗದವರ ವೇತನ | | 5,92,582 | | 8,00,000 |
| 3 | ಕಟ್ಟಡ ಬಾಡಿಗೆ | | 2,01,000 | | 2,50,000 |
| 4 | ವಿದ್ಯುತ್ & ನೀರು | | 9,822 | | 10,000 |
| 5 | ದೂರವಾಣಿ ವೆಚ್ಚ | | 1,06,823 | | 1,10,000 |
| 6 | ಅ) ವಾಹನ ಬಾಡಿಗೆ | | 2,37,556 | | 2,25,000 |
| | ಆ) ವಾಹನ ನಿರ್ವಹಣೆ | | 1,62,182 | | 2,25,000 |

| | | | | | |
|---|---|---|---|---|---|
| 7 | **ಸಭೆ & ಇತರ ಕಛೇರಿ ವೆಚ್ಚಗಳು**<br>ಅ) ವೆಬ್‌ಸೈಟ್ ನಿರ್ವಹಣೆ<br>ಆ) ಸಭಾ ಶುಲ್ಕ & ಪ್ರಯಾಣ ಭತ್ಯೆ<br>ಇ) ಗಣಕಯಂತ್ರ ದುರಸ್ತಿ<br>ಈ) ಕಛೇರಿ ನವೀಕರಣ ವೆಚ್ಚ<br>ಉ) ನೋಂದಣಿ ಶುಲ್ಕ<br>ಊ) ಕಛೇರಿ ಲೇಖನ ಸಾಮಗ್ರಿಗಳು<br>ಋ) ಅಂಚೆ ವೆಚ್ಚ<br>ಎ) ಕಛೇರಿ ನಿರ್ವಹಣೆ<br>ಏ) ಸಭಾ ವೆಚ್ಚ<br>ಐ) ವೈದ್ಯಕೀಯ ವೆಚ್ಚ<br>ಒ) ಅತಿಥ್ಯ ವೆಚ್ಚ<br>ಓ) ಪುಸ್ತಕ & ನಿಯತಕಾಲಿಕಗಳು<br>ಔ) ಬ್ಯಾಂಕು ವೆಚ್ಚ | 20,293<br>1,000<br>13,024<br>69,980<br>300<br>32,640<br>7,497<br>28,375<br>4,324<br>6,506<br>4,950<br>1,686<br>478 | 1,91,052 | 20,000<br>25,000<br>10,000<br><br>50,000<br>10,000<br>30,000<br>10,000<br>10,000<br>10,000<br>25,000 | 2,00,000 |
| 8 | ತರಬೇತಿ/ಪ್ರಚಾರ/ಪ್ರಯಾಣಭತ್ಯೆ/ಇತರೆ ವೆಚ್ಚಗಳು<br>1. ಜಾಹೀರಾತು ವೆಚ್ಚ<br>2. ಲೆಕ್ಕಪರಿಶೋಧಕರ ವೆಚ್ಚ<br>3. ತಿಳುವಳಿಕಾ ಕಾರ್ಯಕ್ರಮ/ವಿಚಾರ ಸಂಕೀರ್ಣ<br>4. ಮನೆಸೇವಕರ ವೆಚ್ಚ<br>5. ರಜಾ ಅವಧಿಯ ಪ್ರಯಾಣ ರಿಯಾಯಿತಿ/ಸ್ವಗ್ರಾಮ ಪ್ರಯಾಣ ರಿಯಾಯಿತಿ<br>6. ಅಂತರರಾಷ್ಟ್ರೀಯ ಜೀವವೈವಿಧ್ಯದಿನಾಚರಣೆ<br>7. ಇನ್ನಿತರ ವೆಚ್ಚಗಳು<br>8. ಪ್ರವಾಸಭತ್ಯೆ | 10,000<br>68,920<br>4,492<br>12,5000<br>17,326<br>10,178<br>2,744<br>1,80,313 | | | |
| 9 | ಗಣಕಯಂತ್ರ ಖರೀದಿ | | 1,78,360 | | 1,00,000 |
| 10 | ಪೀಠೋಪಕರಣಗಳು | | 79,233 | | 50,000 |
| 11 | ಜನೀಸ/ಜಜೀದಾ ಕಾರ್ಯಕ್ರಮಗಳು | | | | 25,00,000 |
| 12 | ಇತರ ವೆಚ್ಚಗಳು | | | | 20,00,000 |
| 13 | ವಾಹನ ಖರೀದಿ | | 5,31,527 | | |
| | | | **44,37,068** | | **96,58,000** |

ಆದ್ದರಿಂದ ಮಂಡಳಿಯ 2007-08ನೇ ಸಾಲಿಗೆ ಪ್ರಸ್ತಾವಿಸಿರುವ ರೂ.96.58 ಲಕ್ಷ ಕಾರ್ಯಯೋಜನೆಗೆ ಅನುಮೋದನೆಗಾಗಿ ಸಭೆಗೆ ಮಂಡಿಸಲಾತದೆ.

**ವಿಷಯ :12. ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಲೆಕ್ಕ ಪರಿಶೋಧಕರ ಹುದ್ದೆಯನ್ನು ಸೃಷ್ಟಿಸಿ ನಿಯೋಜನೆ ಮೇರೆಗೆ ಪಡೆಯುವ ಬಗ್ಗೆ : 1**

ಕರ್ನಾಟಕ ಜೀವವೈವಿಧ್ಯ ಮಂಡಳಿಯು 2003ರಲ್ಲಿ ಸ್ಥಾಪಿತವಾಗಿದೆ. ಇಲ್ಲಿಯತನಕ ಹೊರಗುತ್ತಿಗೆಯ ಆಧಾರದ ಮೇರೆಗೆ ಲೆಕ್ಕಮೇಲ್ವಿಚಾರಕರನ್ನು ನೇಮಿಸಿಕೊಂಡು ಮಂಡಳಿಯ ಲೆಕ್ಕಪತ್ರ ನಿರ್ವಹಣೆಯನ್ನು ಮಾಡಲಾಗುತ್ತಿದೆ.

ಕಳೆದ 3 ವರ್ಷಗಳಲ್ಲಿ ಲೆಕ್ಕ ಪತ್ರಗಳ ನಿರ್ವಹಣೆಯ ಪ್ರಮಾಣ ಗಣನೀಯವಾಗಿ ಹೆಚ್ಚಿದ್ದು ಇತ್ತೀಚೆಗಷ್ಟೆ ಮಹಾಲೇಖಪಾಲರಿಂದ ಲೆಕ್ಕಪರಿಶೋಧನೆಯಾಗಿದೆ ಹಾಗೂ ಹಲವು ಆಡಿಟ್ ಆಕ್ಷೇಪಣೆಗಳನ್ನು ಗಮನಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಯ ಒಬ್ಬ ಲೆಕ್ಕ ಪರಿಶೋಧಕರನ್ನು ನೇಮಿಸಿದಲ್ಲಿ ಸ್ವಾಯತ್ತ ಮಂಡಳಿಯಲ್ಲಿ ನಿರ್ವಹಿಸಬೇಕಾದ ಲೆಕ್ಕನಿರ್ವಹಣೆಯನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ಲೆಕ್ಕಮೇಲ್ವಿಚಾರಕರ ಜೊತೆ ಮಾಡಬಹುದು. ಆದುದರಿಂದ ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಒಬ್ಬ ಲೆಕ್ಕಪರಿಶೋಧಕರ ಹುದ್ದೆಯನ್ನು ಸೃಷ್ಟಿಸುವುದು ಹಾಗೂ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ ಲೆಕ್ಕಪರಿಶೋಧಕರ ಸೇವೆಯನ್ನು ಪಡೆಯುವ ಬಗ್ಗೆ ಮಂಡಳಿಯ ಅನುಮತಿ ಕೋರಿದೆ.

ವಿಷಯ:13.ಕರ್ನಾಟಕ ಜೀವವೈವಿಧ್ಯ ಮಂಡಳಿಯ ಆರ್ಥಿಕ ವಾರ್ಷಿಕ ವರದಿಗಳ ಒಪ್ಪಿಗೆ ಹಾಗೂ ಸದಸ್ಯ ಕಾರ್ಯದರ್ಶಿಗಳಿಗೆ ಆಡಳಿತಾತ್ಮಕ ಅಧಿಕಾರ ನೀಡುವ ಬಗ್ಗೆ

ಜೈವಿಕ ವೈವಿಧ್ಯ ಅಧಿನಿಯಮ 2002ಕಿರ ಪ್ರಕರಣ 33ರ ಪ್ರಕಾರ ರಾಜ್ಯ ಜೀವವೈವಿಧ್ಯ ಮಂಡಳಿಯ ವಾರ್ಷಿಕ ವರದಿಗಳ ಒಪ್ಪಿಗೆ ಹಾಗೂ ರಾಜ್ಯ ಜೀವವೈವಿಧ್ಯ ಮಂಡಳಿಯು ಪ್ರತಿ ಹಣಕಾಸು ವರ್ಷದಲ್ಲಿ ನಿಯಮಿಸಬಹುದಾದಂಥ ಪ್ರಪತ್ರದಲ್ಲಿ ಮತ್ತು ಅಂಥ ಸಮಯದಲ್ಲಿ ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ ತನ್ನ ಚಟುವಟಿಕೆಗಳ ಸಂಪೂರ್ಣ ವಿವರವನ್ನು ನೀಡುವ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಅದರ ಪ್ರತಿಯನ್ನು ಸಲ್ಲಿಸಬೇಕಿರುತ್ತದೆ.

ಕರ್ನಾಟಕ ಜೀವವೈವಿಧ್ಯ ಮಂಡಳಿಯು 1ನೇ ಆಗಸ್ಟ್ 2003ರಲ್ಲಿ ಪ್ರಾರಂಭವಾದ ನಂತರ ಕಳೆದ ಮೂರು ವರ್ಷಗಳ ಆರ್ಥಿಕ ಲೆಕ್ಕಪತ್ರಗಳನ್ನು ದಿನಾಂಕ :16–11–2003 ರಂದು ಮಹಾಲೇಖಪಾಲರ ಲೆಕ್ಕ ಪರಿಶೋಧನಾಧಿಕಾರಿಗಳ ತಂಡವು ಲೆಕ್ಕಪರಿಶೋಧನೆ ಮಾಡಿರುತ್ತಾರೆ ಹಾಗೂ 2003–04, 2004–05 ಮತ್ತು 2005–06ರ ಪರಿಶೋಧಿತ ಲೆಕ್ಕಪತ್ರಗಳನ್ನು ಕಳುಹಿಸಿದ್ದು ಮಂಡಳಿಯ ಅನುಮೋದನೆ ಪಡೆದು ಮಹಾಲೇಖಪಾಲರಿಗೆ ಕಳುಹಿಸಲು ಸೂಚಿಸಿರುತ್ತಾರೆ.

ಈ ದಿಸೆಯಲ್ಲಿ 2003–04, 2004–05 ಮತ್ತು 2005–06ರ ಪರಿಶೋಧಿತ ಲೆಕ್ಕಪತ್ರಗಳನ್ನು ವರದಿಯೊಂದಿಗೆ ಮಂಡಳಿಯ ಅನುಮೋದನೆಗೆ ಮಂಡಿಸಿದೆ (ಅನುಬಂಧ–8) ಹಾಗೂ ಆಡಳಿತ ಮಂಡಳಿಯ ವಾರ್ಷಿಕ ಲೆಕ್ಕಪತ್ರಗಳನ್ನು ಮಹಾಲೇಖಪಾಲರಿಗೆ ಕಳುಹಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡುವ ಬಗ್ಗೆ ವಿಷಯವನ್ನು ಮಂಡಳಿಯ ಒಪ್ಪಿಗೆಗೆ ಮಂಡಿಸಿದೆ.

**ವಿಷಯ :14. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಕಛೇರಿ ಕೆಲಸ ಕಾರ್ಯಗಳಿಗೆ ಬಾಡಿಗೆ ಆಧಾರದ ಮೇಲೆ ವಾಹನ ಪಡೆಯುವ ಬಗ್ಗೆ**

ಕರ್ನಾಟಕ ಜೀವವೈವಿಧ್ಯ ಮಂಡಳಿಯು 2003ರಲ್ಲಿ ಸ್ಥಾಪಿತವಾದಾಗಿನಿಂದ ಕಛೇರಿಯ ಕೆಲಸ ಕಾರ್ಯಗಳಿಗಾಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಖಾಸಗಿ ಸಂಸ್ಥೆಗಳಿಂದ ಪಡೆಯಲಾಗುತ್ತಿದೆ. ಈ ಅವಧಿಯು ದಿನಾಂಖ :31–12–2006 ರಂದು ಮುಕ್ತಾಯವಾಗಿದ್ದು ಹೊಸ ಒಪ್ಪಂದ ಮಾಡಿಕೊಳ್ಳಬೇಕಾಗಿತ್ತು. ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ/139/ಶಿವಾನಿ/2004, ದಿನಾಂಕ :12–09–2006ರ ಪ್ರಕಾರ ಬಾಡಿಗೆ ಆಧಾರದ ಮೇಲೆ ಒಂದು ವಾಹನವನ್ನು ಪೂರೈಸುವ ಬಗ್ಗೆ ದಿನಾಂಕ :16–01–2006ರಂದು ಟೆಂಡರ್ ಪ್ರಕಟಣೆ ಹೊರಡಿಸಲಾಗಿರುತ್ತದೆ. ಆದರೆ ಕರ್ನಾಟಕ ಪಾರದರ್ಶಕ ನಿಯಮಗಳು, 2000ರ ಪ್ರಕಾರ ಈ ಪ್ರಕಟಣೆಯನ್ನು ಟೆಂಡರ್ ಬುಲೆಟಿನ್ ಹಾಗೂ ಪತ್ರಿಕಾ ಪ್ರಕಟಣೆಯ ಮೂಲಕ ಪ್ರಚಾರ ನೀಡದೆ ಕೇವಲ ಕಛೇರಿಯ ನೋಟಿಸ್‌ಬೋರ್ಡಿನಲ್ಲಿ ಪ್ರಕಟಿಸಿ ಟೆಂಡರ್ ಪಡೆದು ವಾಹನವನ್ನು ಬಾಡಿಗೆ ರೂಪದಲ್ಲಿ ಪಡೆಯಲಾಗಿರುತ್ತದೆ. ಈ ಕ್ರಮದ ದೃಡೀಕರಣಕ್ಕಾಗಿ ಸಭೆಗೆ ಮಂಡಿಸಲಾಗಿದೆ.

ವಿಷಯ :15.ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡಲು ಅನ್ವೇಷಣಾ ಸಮಿತಿ (Search Committee) ಯನ್ನು ರಚಿಸುವ ಬಗ್ಗೆ.

ಭಾರತ ಸರ್ಕಾರವು ದಿನಾಂಕ :05-02-2003ರಂದು ಹೊರಡಿಸಿರುವ ದಿ ಬಯಾಲಜಿಕಲ್ ಡೈವರ್ಸಿಟಿ ಆಕ್ಟ್ 2002ರ ಸಂಖ್ಯೆ :18/2003ರ ಪರಿಚ್ಛೇದ 6(22)ರನ್ವಯ, ರಾಜ್ಯ ಸರ್ಕಾರವು ಬೆಂಗಳೂರನ್ನು ಕೇಂದ್ರ ಸ್ಥಾನವನ್ನಾಗಿಸಿ ಕರ್ನಾಟಕ ಜೀವವೈವಿಧ್ಯ ಮಂಡಳಿಯನ್ನು ಸ್ಥಾಪಿಸಿದೆ. ಸದರಿ ಕಾಯ್ದೆಯ ಪ್ರಕರಣ 63ರ ಅಡಿಯಲ್ಲಿ ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ನ್ನು ದಿನಾಂಕ :03-05-2006ರಂದು ಅಧಿಸೂಚನೆಯನ್ನು ಹೊರಡಿಸಿದೆ. ಸದರಿ ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು, 2005ರ ನಿಯಮ 3ರನ್ವಯ ಮಂಡಳಿಗೆ ಅಧ್ಯಕ್ಷರನ್ನು ಆಯ್ಕೆ ಮಾಡಬೇಕಾಗಿರುತ್ತದೆ.

2006ರ ಜೂನ್ ತಿಂಗಳಿನಲ್ಲಿ ಮಂಡಳಿಯು ಸರ್ಕಾರಕ್ಕೆ 6 ಅರ್ಹ ವ್ಯಕ್ತಿಗಳ ಪಟ್ಟಿಯನ್ನು ಸರ್ಕಾರಕ್ಕೆ ಪರಿಶೀಲನೆಗಾಗಿ ಕಳುಹಿಸಲಾಯಿತು. ದಿನಾಂಕ :13-03-2007ರ ಸರ್ಕಾರಿ ಆದೇಶ ಸಂಖ್ಯೆ :ಅಪಜೀ 125 ಇಎನ್‌ವಿ 2003ರಲ್ಲಿ ಈ ಕೆಳಕಂಡವರನ್ನು ಅನ್ವೇಷಣಾ ಸಮಿತಿಯನ್ನು ರಚಿಸಿ ಒಂದು ತಿಂಗಳೊಳಗಾಗಿ ಅರ್ಹತಾ ಪಟ್ಟಿಯನ್ನು ಸಲ್ಲಿಸಬೇಕೆಂದು ಸೂಚಿಸಲಾಗಿದೆ.

| | |
|---|---|
| 1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |
| 2. ಡಾ॥ ಆರ್.ಸುಕುಮಾರನ್ | ಸದಸ್ಯರು |
| 3. ಶ್ರೀ.ಎ.ಕೆ.ವರ್ಮಾ, ಭಾ.ಅ.ಸೇ. | ಸದಸ್ಯರು |
| 4. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ | ಸಮಾವೇಶಕರು |

ಹಾಗೂ ಸಮಿತಿಯು ಒಂದು ತಿಂಗಳೊಳಗಾಗಿ ಆಯ್ಕೆ ಪಟ್ಟಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ಏತನ್ಮಧ್ಯೆ ಮಂಡಳಿಯ 5ನೇ ಸಭೆಯಲ್ಲಿ ಮಂಡಳಿಯ ಆರ್ಥಿಕ ಅನುದಾನ ಹಾಗೂ ಕಾರ್ಯಕ್ರಮಗಳು ಬಹಳ ಸೀಮಿತವಾಗಿರುವುದರಿಂದ ಪೂರ್ಣಾವಧಿ ಅಧ್ಯಕ್ಷರ ನೇಮಕಾತಿ ಅವಶ್ಯಕತೆ ಇಲ್ಲವೆಂದು ಹಾಗೂ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರನ್ನು ಅಧ್ಯಕ್ಷರನ್ನಾಗಿ ಹಾಗೂ ಇಲಾಖಾ ಪ್ರಧಾನ ಕಾರ್ಯದರ್ಶಿಗಳನ್ನು ಉಪ ಅಧ್ಯಕ್ಷರನ್ನಾಗಿ ನೇಮಿಸಲು ಹಾಗೂ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲು ಪ್ರಸ್ತಾವನೆಯನ್ನು ಅಕ್ಟೋಬರ್-2006ರಲ್ಲಿ ಸರ್ಕಾರಕ್ಕೆ ಕಳುಹಿಸಲಾಗಿದೆ.

ಅನ್ವೇಷಣಾ ಸಮಿತಿಯ ಕಾರ್ಯನಿರ್ವಹಣೆ ಬಗ್ಗೆ ಸರ್ಕಾರಿ ಆದೇಶವನ್ನು ಸಭೆಯ ಮಾಹಿತಿ ಹಾಗೂ ಮುಂದಿನ ಸೂಕ್ತ ನಿರ್ದೇಶನಕ್ಕಾಗಿ ಮಂಡಿಸಿದೆ.

ವಿಷಯ :16.ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ವಸತಿ ಗೃಹದ ಸೌಲಭ್ಯ ಒದಗಿಸುವ ಬಗ್ಗೆ :

ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸದಸ್ಯ ಕಾರ್ಯದರ್ಶಿಗಳಿಗೆ ಸ್ವಂತ ಮನೆ ಇರುವುದಿಲ್ಲ.

ಸರ್ಕಾರದ ಕೆಲವು ಮಂಡಳಿ ಮತ್ತು ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಸ್ಥರಿಗೆ ನಿಯೋಜಿತ ವಸತಿ ಗೃಹದ ಸೌಲಭ್ಯ ಇರುತ್ತದೆ. ಇದೇ ರೀತಿಯಲ್ಲಿ ವಸತಿ ಸೌಲಭ್ಯವನ್ನು ಬಾಡಿಗೆ ಆಧಾರದ ಮೇಲೆ ಪಡೆದುಕೊಂಡು ಸದಸ್ಯ ಕಾರ್ಯದರ್ಶಿಗಳಿಗೆ ವಿಸ್ತರಿಸಲು, ಸದರಿ ವಸತಿಯ ಬಾಡಿಗೆಯನ್ನು ಸದಸ್ಯ ಕಾರ್ಯದರ್ಶಿಯವರು ಸರ್ಕಾರದ ನಿಯಮಾವಳಿ ಪ್ರಕಾರ ಪಾವತಿಸಬಹುದಾಗಿದೆ. ಈ ವಿಷಯವನ್ನು ಮಂಡಳಿಯ ಒಪ್ಪಿಗೆಗಾಗಿ ಮಂಡಿಸಿದೆ.

ವಿಷಯ :17.ಅಧ್ಯಕ್ಷರ ಅನುಮತಿ ಮೇರೆಗೆ ಇನ್ನಿತರ ವಿಷಯಗಳು :

ಸದಸ್ಯ ಕಾರ್ಯದರ್ಶಿ
ಕರ್ನಾಟಕ ಜೀವವೈವಿಧ್ಯ ಮಂಡಳಿ.